ಪಿ.ಯು ಕಾಲೇಜ್) ಮುಂಭಾಗದ ವಿಶಾಲ ಆಟದ ಮೈದಾನದ ನಡುವಿನಲ್ಲಿರುವ ಸ್ಮಾರಕವೊಂದರ ನೆನಪನ್ನಷ್ಟೇ ಹೇಳುವೆ. ಆಚೀಚೆ ಮಿನಾರಗಳಿದ್ದು ಅವುಗಳ ನಡುವೆ ಅಗಲವಾದ ಎತ್ತರವಾದ ಗೋಡೆಯಂತಹ ರಚನೆಯ ಸ್ಮಾರಕವದು. ಈದ್ ದಿನದಂದು ಕ್ಲಾಸ್‌ನಲ್ಲಿ ಪಾಠ ನಡೆಯುತ್ತಿದ್ದರೆ ನಮ್ಮ ಗಮನವೆಲ್ಲ ಕಿಟಿಕಿಯಾಚೆ. ಹಬ್ಬದ ನಿಮಿತ್ತ ಸುಣ್ಣ ಮತ್ತು ಇಟ್ಟಿಗೆಗೆಂಪು ಬಳಿದುಕೊಂಡು ಸಜ್ಜಾಗಿರುತ್ತಿದ್ದ ಆ ಸ್ಮಾರಕದೆದುರು ಮುಸ್ಲಿಮರು ನೆರೆಯುವರು. ಹಾಗೆ ನೆರೆದು ಸಾಮೂಹಿಕವಾಗಿ ನಮಾಜು ಮಾಡುವರು. ಶರಣಾರ್ಥರು ಪದಕಮಲಗಳಿಗೆರಗಿ ಮೊರೆಯಿಡುವಂತೆ ತೋರುವ ಈ ನಮಾಜಿನ ದೃಶ್ಯ, ಅವತ್ತು ಒಕ್ಕಂಠದಲ್ಲಿ ಮೊಳಗುತಿದ್ದ ಅವರ ಧ್ವನಿ ಎಲ್ಲವೂ ಬರೆಯಲಾರದ ಕಾವ್ಯದ ಸಾಲಿನಂತೆ ನನ್ನ ಮನದಲ್ಲಿ ಅಚ್ಚೊತ್ತಿಕೊಂಡಿದೆ. ಟಿಪ್ಪು ಅಲ್ಲಿ ಯುದ್ಧ ಮಾಡುತ್ತಿರುವಾಗ ಅವನ ಉಂಗುರ ಬಿತ್ತೆಂದೂ ('ಅಲ್ಲಲ್ಲ, ಉಗುರು' ಎಂದೂ) ಆ ಸ್ಮರಣಾರ್ಥ ಈ ಸ್ಮಾರಕದ ನಿರ್ಮಾಣವಾಯಿತು ಎಂದೂ ಕಥೆ. ಕಥೆಗಳನ್ನು ಬಾಯಿಂದ ಬಾಯಿಗೆ ದಾಟಿಸುತ್ತ ಜೀವಂತ ಇಡುವ ಕಾರ್ಯದಲ್ಲಿ ನಾನೂ ಒಂದು ಬಾಯಿಯಾಗಿದ್ದೆ. ಕಥೆ ದಾಟಿಸುವ ಕೆಲಸ ಬಲು ಖುಶಿಯದಷ್ಟೆ? ಜೀವ ಇರುವ ಯಾರೂ ಅದನ್ನು ಹಾಗೆಹಾಗೆಯೇ ಬಾಯಿಪಾಠ ದಾಟಿಸಲು ಬರುವುದೇ ಇಲ್ಲವಲ್ಲ. ಪ್ರತಿಬಾರಿಯೂ ಹೊಸತೇ ಸಾಲು ಸೇರಿಸುತ್ತ ಅದನ್ನು ಎಷ್ಟೂ ಉದ್ದ ಮಾಡಬಹುದು. ಉದ್ದವಾಗುತ್ತ ಉದ್ದವಾಗುತ್ತ ಅದು ದಂತಕಥೆಯಂತೆ ಕೇಳಬಹುದು. ಅಪಾಯ ಇರುವುದೂ ಇಲ್ಲೇ, ಸ್ವಾರಸ್ಯವಿರುವುದೂ ಇಲ್ಲೇ. ದಂತಕಥೆಗಳೇ ಇಲ್ಲದ ಪ್ರಪಂಚ ಎಷ್ಟು ಭೀಕರ!... ಸತ್ಯಕಥೆಗಳ ಹುಡುಕುತ್ತ ಸಂತೆ ಹೊರಟವರೆ, ನಿಲ್ಲಿ ನಿಲ್ಲಿ. ಸತ್ಯಕಥೆಗಳ ಸತ್ಯ, ಆ ಸತ್ಯದೊಳಗಣ ಮಿಥ್ಯೆ, ಆ ಮಿಥ್ಯೆಯೊಳಗಣ ಕಥೆ, ಆ ಕಥೆಗಳೊಳಗಣ ಕಥೆ... ಬೆನ್ನಟ್ಟಿ ಬೆನ್ನಟ್ಟಿ ವ್ಯರ್ಥ ದಣಿಯುವಿರೇಕೆ? ದಂತಕಥೆಗಳ ಸಖ್ಯ ಬೆಳೆಸಿ.

## ರಾಮಾ... ರಾಮಾ...

ಯಕ್ಷಗಾನಕ್ಕಾಗಲೀ ನಾಟಕಕ್ಕಾಗಲೀ ಶಾಲೆಯನ್ನು ಬಿಟ್ಟರೆ ಬೇರೆ ಕಡೆ, ಹೋದ ಹೆಣ್ಣುಮಕ್ಕಳೇ ನಾವಲ್ಲ. ನನ್ನ ತಂದೆ ಹಾಡುತ್ತಿದ್ದ ಯಕ್ಷಗಾನ ಪ್ರಸಂಗದ ತುಣುಕುಗಳು ಕಿವಿಯ ಮೇಲೆ ಬೀಳುತ್ತಿದ್ದವು. ಪ್ರತೀ ನವರಾತ್ರಿಯಲ್ಲಿ 'ಹೂವಿನ ಕೋಲು' ಎಂಬ ತಂಡ ಬಂದು ಚಾವಡಿಯಲ್ಲಿ ಪ್ರಸಂಗ ಬಿಚ್ಚಿದಾಗ ಪಡಸಾಲೆ ಬಾಗಿಲಿನ ಅಡ್ಡ ನಿಂತು ಕೇಳುತ್ತಿದ್ದೆವು.

ನಮ್ಮ ಮನೆಯ ಸಸ್ಸರಿ ಎದುರೇ ಒಂದು ಸಿನಿಮಾ ಟಾಕೀಸು ಆಗಿದ್ದೇ ಒಂದು ದೊಡ್ಡ ಘಟನೆ. ಅದಕ್ಕೆ ಮುಂಚೆ ಅಲ್ಲೊಂದು ಟೆಂಟ್ ಇತ್ತು. ಅದರಲ್ಲಿ ದೇವರ ಸಿನಿಮಾಕ್ಕೆ ಹೋಗುತ್ತಿದ್ದೆವು. ಬಹುಶಃ ಸಂಪೂರ್ಣ ರಾಮಾಯಣ ಇರಬೇಕು, ಹನುಮಂತನು ಲಂಕೆಗೆ ಹಾರುತ್ತಿದ್ದಾನೆ. ಜೊತೆಗೆ ಧ್ವನಿ: 'ಹನುಮಂತನು ಲಂಕೆಗೆ ಹಾರಿದನೂ...' ಆ ಮಾತು ಬಾರದ ಮೂಕಿ ಸಿನಿಮಾ ಕೊಟ್ಟ ಸಂತೋಷಕ್ಕೆ ಮಿತಿಯಿದ್ದಿದ್ದರೆ ಖಂಡಿತ ಹೇಳುತ್ತಿದ್ದೆ. ರಾಮ ಸೀತೆ ಲಕ್ಷ್ಮಣ ಹನುಮಂತ ಅವರೆಲ್ಲ ಅದುವರೆಗೆ ನಾವು ಪುಸ್ತಕದೊಳಗಿನ ಚಿತ್ರದಲ್ಲಿ ಕಂಡಂಥದೇ ವೇಷಭೂಷಣ ತೊಟ್ಟು, ಅಲ್ಲ, ಇದೇನು, ನಮ್ಮೆದುರಿಗೇ! ಕೈಮುಗಿಯದೆ ಜೀವ ತಡೆಯುವುದಾದರೂ ಹೇಗೆ? ಶ್ರೀ ರಾಮಾಯ ನಮಃ...

...ಆ ಕಾಲವೂ ದಾಟಿತು, ಸಿನಿಮಾ ಮಾತು ಕಲಿಯಿತು. ಒಟ್ಟು, ಸಿನಿಮಾ ಮತ್ತು ಟಾಕೀಸು ತಂದ ರೋಮಾಂಚ ಒಂದೆರಡು ಬಗೆಯದಲ್ಲ. ತೀರ ಕೆಳವರ್ಗದ ಜನರಿಂದ ಹಿಡಿದು